**All India Radio: Bangalore**
**National Bulletin In Kannada**
**29.06.2025  19.35 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಮನ್ ಕಿ ಬಾತ್‌ನಲ್ಲಿ ಕಲಬುರಗಿಯ ಜೋಳದ ರೊಟ್ಟಿ ತಯಾರಿಸಿದ ಮಹಿಳಾ ಸಹಕಾರ ಸಂಘದ ಬಗ್ಗೆ ಉಲ್ಲೇಖ ; ಮಹಿಳಾ ನೇತೃತ್ವದ ಅಭಿವೃದ್ಧಿಗೆ ಪ್ರಧಾನಿ ಹರ್ಷ
2. ೨೦೩೦ರ ವೇಳೆಗೆ ಒಂದು ಬಿಲಿಯನ್ ಡಾಲರ್ ಮೌಲ್ಯದ ಅರಶಿನ ರಫ್ತು ಗುರಿ - ಗೃಹ ಸಚಿವ ಅಮಿತ್ ಶಾ
3. ಪುರಿ ಕಾಲ್ತುಳಿತ : ಉನ್ನತಮಟ್ಟದ ತನಿಖೆಗೆ ಸರ್ಕಾರ ಆದೇಶ : ಮೃತರ ಸಂಬಂಧಿಕರಿಗೆ ೨೫ ಲಕ್ಷ ಪರಿಹಾರ ಘೋಷಣೆ
4. ಅವಧಿಗಿಂತ ಮೊದಲೇ ದೇಶವನ್ನು ಆವರಿಸಿದ ಮುಂಗಾರು : ಮುಂದಿನ ೭ ದಿನಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ

<><><><>

ಇಂದು ೧೨೩ನೇ ಮಾಸಿಕ ಮನ್ ಕಿ ಬಾತ್ ಕಾರ್ಯಕ್ರಮದ ಸಂಚಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸಮಸ್ತ ಭಾರತೀಯರನ್ನುದ್ದೇಶಿಸಿ, 'ವೋಕಲ್ ಫಾರ್ ಲೋಕಲ್' ಮಹಿಳಾ ನೇತೃತ್ವದ ಅಭಿವೃದ್ಧಿ, ಸಂವಿಧಾನ ಹತ್ಯಾದಿನ, ತೀರ್ಥಯಾತ್ರೆಗಳು, ಪರಿಸರ ದಿನ. ಹೀಗೆ ಹಲವು ವಿಚಾರಗಳ ಕುರಿತು ಮಾತನಾಡಿದರು. ತೆಲಂಗಾಣದ ಭದ್ರಾಚಲಂ ಮತ್ತು ಕರ್ನಾಟಕದ ಕಲಬುರಗಿ ಸೇರಿದಂತೆ ದೇಶದಾದ್ಯಂತ ನಮ್ಮ ತಾಯಂದಿರು, ಸಹೋದರಿಯರು ಮತ್ತು ಹೆಣ್ಣುಮಕ್ಕಳ ಇಂತಹ ಅನೇಕ ಕಥೆಗಳಿವೆ. ಇದು ಅವರು ತಮ್ಮ ಜೀವನವನ್ನು ಹೇಗೆ ಪರಿವರ್ತಿಸುತ್ತಿದ್ದಾರೆ ಎಂಬುದು ಮಾತ್ರವಲ್ಲದೆ ದೇಶದ ಭವಿಷ್ಯವನ್ನು ಹೇಗೆ ಬದಲಾಯಿಸುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ ಕಲಬುರಗಿಯಲ್ಲಿ ಮಹಿಳೆಯರು, ಸಹಕಾರ ಸಂಘವೊಂದನ್ನು ರಚಿಸಿ, ಪ್ರತಿದಿನ ಮೂರು ಸಾವಿರಕ್ಕೂ ಅಧಿಕ ಜೋಳದ ರೊಟ್ಟಿಗಳನ್ನು ತಯಾರಿಸಿ ಮಾರಾಟ ಮಾಡುವ ಮೂಲಕ ಸ್ವಾವಲಂಬನೆಯ ಪ್ರತೀಕವಾಗಿದ್ದಾರೆ; ಇವರ ಉತ್ಪನ್ನಗಳು, ಕೇವಲ ಹಳ್ಳಿಗಳಿಗೆ ಸೀಮಿತವಾಗದೆ, ಆನ್‌ಲೈನ್ ಆಹಾರ ವೇದಿಕೆಗಳ ಮೂಲಕ ಬೆಂಗಳೂರಿನಂತಹ ಮಹಾನಗರಗಳಿಗೂ ತಲುಪಿವೆ ಎಂದು ಪ್ರಧಾನಿ ಹರ್ಷ ವ್ಯಕ್ತಪಡಿಸಿದರು. ತೆಲಂಗಾಣದಲ್ಲಿ ಹೊಲಗಳಲ್ಲಿ ದಿನವಿಡಿ ದುಡಿಯುತ್ತಿದ್ದ ಭದ್ರಾಚಲಂನ ಮಹಿಳೆಯರು, ಸಿರಿಧಾನ್ಯ ಶ್ರೀ ಅನ್ನದ ಬಿಸ್ಕೆಟ್ ತಯಾರಿಸಿ, ಭದ್ರಾದ್ರಿ ಮಿಲೆಟ್ ಮ್ಯಾಜಿಕ್ ಎಂಬ ಸಂಸ್ಥೆ ಸ್ಥಾಪಿಸಿ ಲಂಡನ್‌ವರೆಗೂ ವ್ಯಾಪಾರ ವಿಸ್ತರಿಸಿಕೊಂಡಿದ್ದಾರೆ.

ಹೀಗೆ, ವಿವಿಧ ರಾಜ್ಯಗಳಲ್ಲಿ ಹಲವಾರು ಯಶಸ್ಸಿನ ಕಥೆಗಳಿದ್ದು, ಮಧ್ಯಪ್ರದೇಶ ಬಾಲ್ಘಾಟ್ ಜಿಲ್ಲೆಯ ಸುಮಾ ಉಯಿಕೆ ಅವರು ಆರಂಭಿಸಿದ ದೀದಿ ಕ್ಯಾಂಟೀನ್ ಮತ್ತು ಥರ್ಮಲ್ ಚಿಕಿತ್ಸಾ ಕೇಂದ್ರವೂ ಸೇರಿದೆ ಎಂದು ಅವರು ಹೇಳಿದರು. ಇತ್ತೀಚೆಗೆ ಆಚರಿಸಲಾದ 'ಅಂತಾರಾಷ್ಟ್ರೀಯ ಯೋಗ'ದಿನ ವಿಶೇಷತೆಗಳನ್ನು ಮೆಲುಕು ಹಾಕಿದ ಅವರು, ಈ ಆಚರಣೆಯ ಮೂಲಕ ದೇಶ-ವಿದೇಶಗಳ ಕೋಟ್ಯಾಂತರ ಜನರು, ಕಳೆದ ಹತ್ತು ವರ್ಷಗಳಲ್ಲಿ ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಂಡಿದ್ದಾರೆ.  ಪ್ರಧಾನ ಸಮಾರಂಭ ನಡೆದ ವಿಶಾಖಪಟ್ಟಣದ ಕಡಲ ತೀರದಲ್ಲಿ ಮೂರು ಲಕ್ಷ ಜನರು ಒಗ್ಗೂಡಿ ಯೋಗ ಮಾಡಿದ್ದಾರೆ. ಇದೇ ನಗರದಲ್ಲಿ ಮತ್ತೊಂದು ಅದ್ಭುತ ಕಾರ್ಯಕ್ರಮ ನಡೆದಿದ್ದು, ೨ ಸಾವಿರಕ್ಕೂ ಅಧಿಕ ಬುಡಕಟ್ಟು ವಿದ್ಯಾರ್ಥಿಗಳು ೧೦೮ ನಿಮಿಷಗಳ ಕಾಲ ೧೦೮ ಸೂರ್ಯ ನಮಸ್ಕಾರ ಮಾಡಿದ್ದಾರೆ. ಇನ್ನೊಂದೆಡೆ ವಿಶೇಷ ಚೇತನರು ಯೋಗ ಶಿಬಿರದಲ್ಲಿ ಭಾಗವಹಿಸಿರುವ ಕುರಿತು ಪ್ರಧಾನಿ ಹರ್ಷ ವ್ಯಕ್ತಪಡಿಸಿದರು. ತೀರ್ಥಯಾತ್ರೆಗಳ ಬಗ್ಗೆ ಮಾತನಾಡಿದ ಪ್ರಧಾನಿ, ಕೈಲಾಸ ಮಾನಸ ಸರೋವರ ಯಾತ್ರೆ, ಅಮರನಾಥ ಯಾತ್ರೆ, ಪುರಿ ಜಗನ್ನಾಥ್ ರಥಯಾತ್ರೆ ಸೇರಿದಂತೆ ಲಕ್ಷಾಂತರ ಭಕ್ತಾದಿಗಳು

ಪಾಲ್ಗೊಳ್ಳುವ ಇಂತಹ ಯಾತ್ರೆಗಳು ಏಕ್ ಭಾರತ್, ಶ್ರೇಷ್ಠ ಭಾರತ್ ಭಾವನೆಯ ಪ್ರತಿಬಿಂಬವಾಗಿದೆ ಎಂದು ತಿಳಿಸಿದರು. ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆ ಡಬ್ಲ್ಯುಎಚ್‌ಒ, ಭಾರತವನ್ನು ಕಣ್ಣಿನ ಗಂಭೀರ ಸಮಸ್ಯೆಯಾದ ಟ್ರಕೋಮಾ ಮುಕ್ತ ಎಂಬುದಾಗಿ ಘೋಷಿಸಿದೆ ಎಂದು ಮಾಹಿತಿ ನೀಡಿದರು. ಬಳಿಕ ಭಾರತದ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿ ಕುರಿತ ಅಂತಾರಾಷ್ಟ್ರೀಯ ಕಾರ್ಮಿಕ ಒಕ್ಕೂಟದ ವರದಿ ಕುರಿತು ಪ್ರಸ್ತಾಪಿಸಿದ ಪ್ರಧಾನಿ, ಭಾರತದ ಶೇಕಡ ೬೪ ರಷ್ಟು ಜನತೆ ಸಾಮಾಜಿಕ ಭದ್ರತಾ ಯೋಜನೆಗಳ ಉಪಯೋಗ ಪಡೆಯುತ್ತಿದ್ದಾರೆ ಎಂದು ಉಲ್ಲೇಖಿಸಿದರು. ಇತ್ತೀಚೆಗೆ ದೇಶಾದ್ಯಂತ ಆಚರಿಸಲಾದ 'ಸಂವಿಧಾನ ಹತ್ಯಾದಿನದ' ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ, ತುರ್ತು ಪರಿಸ್ಥಿತಿಯ ಕುರಿತು ಮಾಜಿ ಪ್ರಧಾನಮಂತ್ರಿ ಮುರಾರ್ಜಿ ದೇಸಾಯಿ, ಮಾಜಿ ಉಪ ಪ್ರಧಾನಿ ಬಾಬು ಜಗಜೀವನ್ ರಾಮ್ ಅವರ ಧ್ವನಿ ಮುದ್ರಣದ ತುಣುಕನ್ನು ಶ್ರೋತೃಗಳಿಗೆ ಕೇಳಿಸಿ, ಆ ಸಮಯದಲ್ಲಾದ ಹಲವು ಬೆಳವಣಿಗೆಗಳ ಕುರಿತು ವಿವರಿಸಿದರು. ಪ್ರತಿ  ಮನ್ ಕಿ ಬಾತ್ ನಲ್ಲಿ ಪ್ರಧಾನಿ, ಒಂದೊಂದು ವಿಶೇಷತೆಯನ್ನು ಪ್ರಸ್ತಾಪಿಸುವಂತೆ ಈ ಬಾರಿಯೂ ಮೇಘಾಲಯದ ಎರಿ ರೇಷ್ಮೆ ಬಗ್ಗೆ ಮಾತನಾಡಿದರು. ಈ ಉತ್ಪನ್ನಕ್ಕೆ ಕೆಲವು ದಿನಗಳ ಹಿಂದಷ್ಟೇ ಜಿಐ ಟ್ಯಾಗ್ ದೊರೆತಿದೆ. ಈ ಎರಿ ರೇಷ್ಮೆಯೂ ಹೇಗೆ ಮೇಘಾಲಯದ ಸ್ಥಳೀಯ ಸಮುದಾಯಗಳ ಸಂಸ್ಕೃತಿ ಹಾಗೂ ಕೌಶಲ್ಯದ ಭಾಗವಾಗಿದೆ ಎಂಬುದನ್ನು ತಿಳಿಸಿದರು. ಈ ತಿಂಗಳು ಆಚರಿಸಲಾದ ವಿಶ್ವ ಪರಿಸರ ದಿನದ ಕುರಿತು ಮಾತನಾಡಿದ ಪ್ರಧಾನಿ, ಹಲವು ಮಹನೀಯರು ಪರಿಸರ ಸಂರಕ್ಷಣೆಗೆ ಕೈಗೊಂಡ ಸಂಕಲ್ಪ ಹಾಗೂ ಕ್ರಮಗಳು ಕುರಿತು ಮಾಹಿತಿ ನೀಡಿದ್ದಾರೆ.  ದಶಲಕ್ಷ ಮರಗಳ ಅಭಿಯಾನ ಸಿಂದೂರ್ ಫಾರೆಸ್ಟ್ ಅನ್ನು 'ಆಪರೇಷನ್ ಸಿಂದೂರ್' ನಲ್ಲಿ ಪಾಲ್ಗೊಂಡ ವೀರ ಯೋಧರಿಗೆ ಸಮರ್ಪಿಸಲಾಗುತ್ತಿದೆ. ಇದೇ ರೀತಿ, ಪರಿಸರ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಏಕ್ ಪೇಡ್ ಮಾ ಕೆ ನಾಮ್ ಅಭಿಯಾನದಲ್ಲೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಸಮಸ್ತ ಜನತೆಗೆ ಪ್ರಧಾನಿ ಕರೆ ನೀಡಿದರು. ಪರಿಸರ ಸಂರಕ್ಷಣೆಯಲ್ಲಿ ತ್ಯಾಜ್ಯ ನಿರ್ವಹಣೆಯ ಪಾತ್ರದ ಕುರಿತು ಮಾತನಾಡಿದ ಪ್ರಧಾನಿ, ಕಾರ್ಬನ್ ನ್ಯಾಚುರಲ್ ಗ್ರಾಮಪಂಚಾಯಿತಿ ಪಾಟೋದಾ ಬಗ್ಗೆ ಪ್ರಸ್ತಾಪಿಸಿದರು.

<><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂದು ತೆಲಂಗಾಣದ ನಿಜಾಮಾಬಾದ್‌ನಲ್ಲಿ ರಾಷ್ಟ್ರೀಯ ಅರಿಶಿನ ಮಂಡಳಿಯ ಪ್ರಧಾನ ಕಚೇರಿಯನ್ನು ಔಪಚಾರಿಕವಾಗಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ನಿಜಾಮಾಬಾದ್‌ಗೆ ರಾಷ್ಟ್ರೀಯ ಅರಿಶಿನ ಮಂಡಳಿಯನ್ನು ಮಂಜೂರು ಮಾಡುವ ಮೂಲಕ ಅರಿಶಿನ ರೈತರು ಮತ್ತು ಜನರ ೪೦ ವರ್ಷಗಳ ಕನಸನ್ನು ನನಸಾಗಿಸಿದ್ದಾರೆ ಎಂದು ಹೇಳಿದರು. ೨೦೩೦ ರ ವೇಳೆಗೆ ಒಂದು ಬಿಲಿಯನ್ ಡಾಲರ್ ಮೌಲ್ಯದ ಅರಿಶಿನ ರಫ್ತು ಸಾಧಿಸಬೇಕು ಎಂದು ಹೇಳಿದರು. ನಿಜಾಮಾಬಾದ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಇಳುವರಿಯನ್ನು ಪಡೆಯುತ್ತಿದ್ದರೂ ಅರಿಶಿನ ರೈತರು ಉತ್ತಮ ಬೆಲೆಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಅವರು ಹೇಳಿದರು.

<><><>

ಒಡಿಶಾದ ಪುರಿಯಲ್ಲಿರುವ ಶ್ರೀ ಗುಂಡಿಚಾ ದೇವಾಲಯದ ಬಳಿ ಇಂದು ನಸುಕಿನ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಕನಿಷ್ಠ ಮೂವರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಬೆಳಗಿನ ಜಾವ ೪ ಗಂಟೆ ಸುಮಾರಿಗೆ ನೂರಾರು ಭಕ್ತರು ದೇವಾಲಯದ ಬಳಿ ನೆರೆದಿದ್ದ ಸಂದರ್ಭದಲ್ಲಿ ಈ ದುರ್ಘಟನೆ ನಡೆದಿದೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಈ ಪೈಕಿ ಆರು ಜನರ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ. ಒಡಿಶಾ ಸರ್ಕಾರ ಉನ್ನತ ಮಟ್ಟದ ಆಡಳಿತಾತ್ಮಕ ತನಿಖೆಗೆ ಆದೇಶಿಸಿದೆ. ದುರಂತ ಘಟನೆಯ ಬಗ್ಗೆ ಒಡಿಶಾ ಅಭಿವೃದ್ಧಿ ಆಯುಕ್ತ ಅನು ಗರ್ಗ್ ತನಿಖೆ ನಡೆಸಲಿದ್ದಾರೆ. ರಾಜ್ಯ ಸರ್ಕಾರವು ಮೃತರ ಹತ್ತಿರದ ಸಂಬಂಧಿಕರಿಗೆ ಇಪ್ಪತ್ತೈದು ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಿಸಿದೆ.

<><><><>

ಸಾಮಾನ್ಯ ಅವಧಿಗಿಂತ ಒಂಬತ್ತು ದಿನ ಮೊದಲೇ ಇಂದು ಇಡೀ ದೇಶವನ್ನು ಮುಂಗಾರು ಆವರಿಸಿದೆ. ಮುಂದಿನ ಏಳು ದಿನಗಳಲ್ಲಿ ಜಾರ್ಖಂಡ್, ಒಡಿಶಾ, ಬಿಹಾರ, ಮಧ್ಯಪ್ರದೇಶ, ಛತ್ತೀಸ್‌ಗಢ, ಹಿಮಾಚಲ ಪ್ರದೇಶ, ಉತ್ತರಾಖಂಡ, ಉತ್ತರ ಪ್ರದೇಶ, ಗೋವಾ, ಗುಜರಾತ್ ಮತ್ತು ಈಶಾನ್ಯ ಭಾರತದ ಹಲವು ಭಾಗಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ನಾಳೆಯಿಂದ ಉತ್ತರ ಪ್ರದೇಶಕ್ಕೆ ಎರಡು ದಿನಗಳ ಭೇಟಿ ನೀಡಲಿದ್ದಾರೆ. ಅವರು ಬರೇಲಿಯಲ್ಲಿರುವ ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯ ೧೧ನೇ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಅದೇ ದಿನ, ರಾಷ್ಟ್ರಪತಿಗಳು ಗೋರಖ್‌ಪುರದ ಏಮ್ಸ್‌ನ ಮೊದಲ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಮಂಗಳವಾರ, ರಾಷ್ಟ್ರಪತಿ ಮುರ್ಮು ಗೋರಖ್‌ಪುರದಲ್ಲಿ ಮಹಾಯೋಗಿ ಗುರು ಗೋರಖ್‌ನಾಥ್ ಆಯುಷ್ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿದ್ದಾರೆ. ಅವರು ಗೋರಖ್‌ಪುರದ ಮಹಾಯೋಗಿ ಗೋರಖ್‌ನಾಥ್ ವಿಶ್ವವಿದ್ಯಾಲಯಕ್ಕೂ ಭೇಟಿ ನೀಡಲಿದ್ದಾರೆ, ಅಲ್ಲಿ ಅವರು ಅದರ ಆಡಿಟೋರಿಯಂ, ಶೈಕ್ಷಣಿಕ ಬ್ಲಾಕ್ ಮತ್ತು ಪಂಚಕರ್ಮ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ ಮತ್ತು ಹೊಸ ಬಾಲಕಿಯರ ಹಾಸ್ಟೆಲ್‌ಗೆ ಅಡಿಪಾಯ ಹಾಕಲಿದ್ದಾರೆ.

<><><><>

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ನಾಳೆ ಧರ್ಮಶಾಲಾದ ತಪೋವನದಲ್ಲಿ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ವಲಯ-೨ರ ವಾರ್ಷಿಕ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಈ ವಲಯವು ದೆಹಲಿ, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಮತ್ತು ಪಂಜಾಬ್ ರಾಜ್ಯಗಳನ್ನು ಒಳಗೊಂಡಿದೆ. ಸಮ್ಮೇಳನವು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಬಲಪಡಿಸಲು, ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಮತ್ತು ಸಮಕಾಲೀನ ಯುಗದಲ್ಲಿ ಆಡಳಿತ ಮತ್ತು ಶಾಸಕಾಂಗ ಕಾರ್ಯನಿರ್ವಹಣೆಗೆ ನವೀನ ವಿಧಾನಗಳನ್ನು ಅನ್ವೇಷಿಸಲು ಒಂದು ಪ್ರಮುಖ ವೇದಿಕೆಯಾಗಿ ಕಾರ್ಯನಿರ್ವಹಿಸುವ ಗುರಿಯನ್ನು ಹೊಂದಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>